ದಿನಾಂಕಃ 27-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಪ್ರತಿವಾದಿ 8 ರವರ ಪರ ಶ್ರೀ ಸಿ ಎಲ್ ಎಂ ವಕೀಲರಿಂದ,

1) ನನ್ನ ತಂದೆಗೆ ನಾವು ಮೂರು ಜನ ಹೆಣ್ಣು ಮಕ್ಕಳು ಮತ್ತು ಮೂರು ಜನ ಗಂಡು ಮಕ್ಕಳು ಎಂದರೆ ಸರಿ. ಮೂರು ಜನ ಗಂಡು ಮಕ್ಕಳ ಪೈಕಿ ಇಬ್ಬರು ತೀರಿಕೊಂಡಿರುತ್ತಾರೆ ಎಂದರೆ ಸರಿ. ನಾನು 1976 ನೇ ಸಾಲಿನಲ್ಲಿ ಮದುವೆ ಆಗಿರುತ್ತೇನೆ. ನಾನು ಹಾಸನ ಜಿಲ್ಲೆಯ ಆಲೂರು ತಾಲ್ಲೂಕಿನಲ್ಲಿ ವಾಸವಾಗಿರುತ್ತೇನೆ. ವಾದಿ 2 ಮತ್ತು 3 ರವರು ಮೈಸೂರಿನಲ್ಲಿ ವಾಸವಾಗಿರುತ್ತಾರೆ. ನನ್ನ ತಂದೆ ನನ್ನ ಮದುವೆಯಾದ ಮೂರು ತಿಂಗಳ ನಂತರ ತೀರಿಕೊಂಡಿರುತ್ತಾರೆ. ನನ್ನ ತಂದೆಗೆ ದಾವಾ ಆಸ್ತಿಗಳನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ. ಪ್ರತಿವಾದಿ 10 ರವರು ನನ್ನ ಸೋದರ ಮಾವನ ಮಗ.

2) ಪ್ರತಿವಾದಿ 3 ರವರು ದಾವಾ ಸ್ವತ್ತು ಐಟಂ ನಂ. 2 ರಿಂದ 4 ಆಸ್ತಿಗಳನ್ನು ಪ್ರತಿವಾದಿ 9 ಮತ್ತು 10 ರವರಿಗೆ 2003 ನೇ ಇಸವಿಯಲ್ಲಿ ಮಾರಾಟ ಮಾಡಿರುತ್ತಾರೆ. ಪ್ರತಿವಾದಿ 3 ರವರು ಪ್ರತಿವಾದಿ 11 ರವರಿಗೂ ಸಹ ಆಸ್ತಿ ಮಾರಾಟ ಮಾಡಿರುತ್ತಾರೆ. ಪ್ರತಿವಾದಿ 10 ರವರು ತಾನು ಖರೀದಿ ಮಾಡಿದ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಮಾಡಿರುತ್ತಾರೆ ಎಂದರೆ ಸರಿ. ಸದರಿ ಆಸ್ತಿಯಲ್ಲಿ ಇರುವ ಹಳೆಯ ಮನೆಯನ್ನು ಉಳಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸದರಿ ಮನೆಯನ್ನು ಕೆಡವಿರುತ್ತಾರೆ ಎಂದು ನುಡಿಯುತ್ತಾರೆ. 9 ಮತ್ತು 10 ನೇ ಪ್ರತಿವಾದಿಗಳು ಕ್ರಯ ಪತ್ರದಂತೆ ಖಾತೆ ಬದಲಾವಣೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

3) ಪ್ರತಿವಾದಿ 9 ಮತ್ತು 10 ರವರು ತಾವು ಕ್ರಯ ಮಾಡಿದ ಆಸ್ತಿಗಳಲ್ಲಿ ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 21-05-2004 ರಂದು 3 ನೇ ಪ್ರತಿವಾದಿ 6 ನೇ ಪ್ರತಿವಾದಿಗೆ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. 11 ನೇ ಪ್ರತಿವಾದಿ ತಾನು ಖರೀದಿ ಮಾಡಿದ ಆಸ್ತಿಯನ್ನು 26-11-2005 ರಂದು

ಪ್ರತಿವಾದಿ 10 ರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸ್ವತ್ತಿನಲ್ಲಿ 10 ನೇ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಸಲ್ಲಿಸಿದ ನಂತರ ನನ್ನ ಮತ್ತು ನನ್ನ ತಮ್ಮನ ನಡುವೆ ಸಂಬಂಧ ಚೆನ್ನಾಗಿರುವುದಿಲ್ಲ. ಪ್ರತಿವಾದಿ 9 ಮತ್ತು 10 ರವರು ಖರೀದಿ ಮಾಡಿದ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ಮತ್ತು ಭಾಗಾಂಶದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

4) 3 ನೇ ಪ್ರತಿವಾದಿ ಕಾನೂನು ಬದ್ಧ ಅವಶ್ಯಕತೆಗಾಗಿ ಮತ್ತು ತನ್ನ ಮಗಳ ಮದುವೆಗಾಗಿ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳಲ್ಲಿ ನಾನು ಸ್ವಾಧೀನ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 9 ಮತ್ತು 10 ರವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 9 ರಿಂದ 11 ರವರು ಖರೀದಿ ಮಾಡಿದ ವಿಷಯ ನನಗೆ ಕ್ರಯ ಪತ್ರ ಮಾಡುವ ಕಾಲಕ್ಕೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ